ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕನಿಷ್ಟ ಭತ್ಯೆಯನ್ನು ಯಾವುದೇ ಅಂತರವಿಲ್ಲದೆ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಸಿ.ಬೈರೆಗೌಡ (ಕೃಷಿ ಸಚಿವರು):-

ಅ) ಹೌದು.

ಆ) ಇಲ್ಲ.

ಇ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಕುಂದಾಪುರ ತಾಲ್ಲೂಕಿನ 1994-95 ಮತ್ತು 95-96ನೇ ಸಾಲಿನ ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ : 554 (850)

ಶ್ರೀ ಐ.ಎಂ.ಜಯರಾಮಶೇಟ್ಟಿ (ಬೈಂದೂರು):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 1994-95,95-96ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಯಿತು?

2. ಈ ಫಲಾನುಭವಿಗಳಿಗೆ ಯಾವ ರೀತಿಯಲ್ಲಿ ಯಾವ ದಿನಾಂಕದಂದು ಹಣ ಬಿಡುಗಡೆ ಮಾಡಲಾಯಿತು. ಹಾಗೂ ಬಿಡುಗಡೆ ಮಾಡಲು ಬಾಕಿ ಇರುವ ಹಣದ ವಿವರಗಳನ್ನು ಒದಗಿಸುವುದು.

3. 94-95ರ ಫಲಾನುಭವಿಗಳಂತೆ 95-96ರ ಫಲಾನುಭವಿಗಳಿಗೆ ಆದ್ಯತೆ ನೀಡಿ 94-95ರ ಫಲಾನುಭವಿಗಳಿಗೆ ತಾರತಮ್ಯ ಮಾಡಿರುವುದು ನಿಜವೆ?

4. 1994-95ರ ಫಲಾನುಭವಿಗಳಿಗೆ ಬಾಕಿ ಹಣವನ್ನು ಎಂದು ವಿತರಿಸಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

1. ಕುಂದಾಪುರ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಲ್ಲಿ ಗುರುತಿಸಲಾದ ಫಲಾನುಭವಿಗಳ ವಿವರ ಈ ಕೆಳಗಿನಂತಿವೆ.

1994-95	1995-96
752	372

2. ಎಲ್ಲಾ ಫಲಾನುಭವಿಗಳಿಗೆ ಸಂಬಂಧಿಸದಂತೆ ಕಾಮಗಾರಿಯ ಹಂತ ಪರಿಶೀಲನೆ ಮಾಡಿ ಹಂತಹಂತವಾಗಿ ಚಕ್ ಮುಖಾಂತರ ಹಣ ಪಾವತಿಸಲಾಗುತ್ತಿದೆ. ಈ ಬಗ್ಗೆ ಹಣ ಬಿಡುಗಡೆ ವಿವರ ಈ ಕೆಳಗಿನಂತಿದೆ.

1994-95ರ ವಿವರ

ಕ್ರ ಸಂ	ಚಕ್‌ನಂ	ದಿನಾಂಕ	ಮೊತ್ತ (ಲಕ್ಷಗಲ್ಲಿ)
1.	022141	14.9.94	8.00
2.	006809	6.1.94	10.00
3.	022167	30.1.95	5.00
4.	484163	2.3.95	4.00
5.	958115	23.5.95	8.00
6.	958202	7.6.95	10.00
7.	637915	24.7.95	4.82
8.	0308631	10.7.96	1.93
			51.75

1995-96

ಇನ್ನು ಬಿಡುಗಡೆಗೆ ಬಾಕಿ ರೂ. 54.05 ಲಕ್ಷಗಳು

1995-96

1.	5308774	14.11.96	9.00
2.	530079	3.2.96	8.20
3.	555757	2.4.96	9.30
4.	0555763	15.4.96	11.95
5.	5038645	16.7.96	7.89
			46.34

ಬಿಡುಗಡೆ ರೂ. 28.06 ಲಕ್ಷಗಳು ಬಾಕಿಯಿದೆ.

3. ಯಾವುದೇ ರೀತಿಯ ತಾರತಮ್ಯ ಮಾಡಿರುವುದಿಲ್ಲ

4. ಆದಷ್ಟು ಬೇಗ ಬಿಡುಗಡೆ ಮಾಡಲಾಗುವುದು